ದಿನಾಂಕ:- " 02/2/2019 " ರಂದು
ನಡೆದ ಸಭಾ ನಡವಳಿಗಳು

1. ವಾರ್ಡ್, ಕ್ರೈಂ ಶೀಟ್‌ಗಳ ನವೀಕರಣ ಶೀಟ್‌ಗಳನ್ನು ಸಂಗ್ರಹಿಸುವ ಬಗ್ಗೆ.

2. ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವ ಬಗ್ಗೆ. ಗಾಯಾಳುಗಳ ಬಗ್ಗೆ "IPP hospital ಸಿಬ್ಬಂದಿಯವರನ್ನು ಸಂಪರ್ಕಿಸುವ ಬಗ್ಗೆ."

3. CCTV points ಬಗ್ಗೆ ಹಾಗೂ CCTV display Board ಗಳನ್ನು ಎಲ್ಲಾ ಠಾಣೆ ಸರ್ಕಲ್‌ಗಳಲ್ಲಿ ಅಳವಡಿಸಲು ಸೂಚಿಸಲಾಗಿರುತ್ತದೆ. ಸಂಬಂಧಪಟ್ಟ ಸಿಬ್ಬಂದಿಗೆ ಸೂಚನೆ ನೀಡಲಾಗಿರುತ್ತದೆ.

4. ಮುನ್ಸಿಪಲ್ ನಂಬರ್‌ಗಳ ಪ್ಲೇಟುಗಳನ್ನು ಅಳವಡಿಸಲು ಸೂಚಿಸಲಾಯಿತು.

5. ನ್ಯಾಯಾಲಯಗಳ ಕಾರ್ಯಗಳ ಬಗ್ಗೆ ಚರ್ಚಿಸಲಾಯಿತು. ಸಂಬಂಧಪಟ್ಟ ಸಿಬ್ಬಂದಿಗೆ (health) ಬಗ್ಗೆ ಹಾಗೂ ಕಾರ್ಯಗಳನ್ನು ಶೀಘ್ರವಾಗಿ ಮಾಡಲು ಸೂಚಿಸಲಾಯಿತು.

ದಿನಾಂಕ: 02.2.2019 ರಂದು ನಡೆದ ವಾರ್ಡ್ ನಂ. 68ರ ಗೆಳೆಯರಬಳಗದಲ್ಲಿರುವ ಐ.ಪಿ.ಪಿ. ಆಸ್ಪತ್ರೆಯ ಆವರಣದಲ್ಲಿನ ಕೊಠಡಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಗೆ ಹಾಜರಾಗಿದ್ದ ಅಧ್ಯಕ್ಷರು, ಹಾಗೂ ಸದಸ್ಯರು

1) ಶ್ರೀ ಎಸ್. ಕೇಶವಮೂರ್ತಿ – ಅಧ್ಯಕ್ಷರು
2) ಸಹಾಯಕ ಇಂಜಿನಿಯರ್ ವಾರ್ಡ್ ನಂ. 68 – ಕಾರ್ಯದರ್ಶಿ ಹಾಗೂ ಸಂಚಾಲಕರು
3) ಶ್ರೀ ಶ್ರೀನಿವಾಸ್ – ಸದಸ್ಯರು
4) ಶ್ರೀ ಎಂ. ವಿಶ್ವನಾಥ್ – ಸದಸ್ಯರು
5) ಶ್ರೀಮತಿ ಹೇಮಲತಾ – ಸದಸ್ಯರು
6) ಶ್ರೀಮತಿ ರಾಜೇಶ್ವರಿ – ಗೈರು ಹಾಜರಿ
7) ಗೆಳೆಯರಬಳ ವೆಲ್‌ಫೇರ್ ಅಸೋಸಿಯೇಷನ್
   ಗೋವಿಂದರಾಜ್ – ಸದಸ್ಯರು
8) ಶ್ರೀ ಸುಬ್ರಮಣ್ಯಸ್ವಾಮಿ ಪಂಚಮುಖಿ
   ಗಣಪತಿ ದೇವಸ್ಥಾನ ಟ್ರಸ್ಟ್ : – ಪ್ರಭು ಆರ್ ಸದಸ್ಯರು
9) ಶ್ರೀ ಬಸವೇಗೌಡ – ಸದಸ್ಯರು
10) ಶ್ರೀ ಜಯದೇವ್ – ಗೈರುಹಾಜರಿ
11) ಶ್ರೀ ಮಲ್ಲೇಶ್ – ಗೈರು ಹಾಜರಿ
12) ಶ್ರೀ ಭೀಮರಾಜು – ಸದಸ್ಯರು
13) ಟಿ. ತಿಮ್ಮರಾಜು – ಸದಸ್ಯರು

ದಿನಾಂಕ: 02.02.2019 ರಂದು ಬೆಳಿಗ್ಗೆ 11.30 ಗಂಟೆಗೆ ಮಹಾಲಕ್ಷ್ಮೀಪುರ, ಗೆಳೆಯರಬಳಗ ಐ.ಪಿ.ಪಿ. ಆಸ್ಪತ್ರೆಯ ಆವರಣದಲ್ಲಿರುವ ವಾರ್ಡ್ ಕಛೇರಿಯಲ್ಲಿ ಶ್ರೀ ಎಸ್. ಕೇಶವಮೂರ್ತಿ ಪಾಲಿಕೆ ಸದಸ್ಯರು ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಸಭೆಯ ಆರಂಭದಲ್ಲಿ ಕಾರ್ಯದರ್ಶಿಯವರಾದ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 68 ರವರು ಸಭೆಗೆ ಹಾಜರಾದ ಅಧ್ಯಕ್ಷರು, ಸದಸ್ಯರು ಹಾಗೂ ಸಾರ್ವಜನಿಕರನ್ನು ಸ್ವಾಗತಿಸಿದರು.

ಕಳೆದ ವಾರ್ಡ್ ಸಮಿತಿ ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಚರ್ಚಿಸಲಾಯಿತು.

ವಾರ್ಡ್‌ನ ಅಡ್ಡರಸ್ತೆಗಳಲ್ಲಿ ನಾಮಫಲಕಗಳು ಹಾಳಾಗಿದ್ದು, ಅವುಗಳನ್ನು ಸರಿಪಡಿಸುವಂತೆ ಸೂಚಿಸಿರುತ್ತಾರೆ. ವಾರ್ಡ್‌ನ ಅಭಿಯಂತರರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಗೆಳೆಯರ ಬಳಗ ಐ.ಪಿ.ಪಿ. ಆಸ್ಪತ್ರೆಯ ಪಕ್ಕದ ರಸ್ತೆಯು ರಸ್ತೆ ಅಗೆತದಿಂದ ಹಾಳಾಗಿದ್ದು, ಸಾರ್ವಜನಿಕರ ಓಡಾಟಕ್ಕೆ ತುಂಬಾ ಅನಾನುಕೂಲವಾಗುತ್ತಿರುತ್ತದೆ. ಆದುದರಿಂದ ಸದರಿ ರಸ್ತೆಯನ್ನು ಸರಿಪಡಿಸಲು ಸಭೆಯಲ್ಲಿ ಸೂಚಿಸಲಾಯಿತು.

ಮಹಾಲಕ್ಷ್ಮೀ ಬಡಾವಣೆ ವಾರ್ಡ್ ವ್ಯಾಪ್ತಿಯಲ್ಲಿ ಹಾಗೂ ಉದ್ಯಾನವಗಳಲ್ಲಿ ಅಳವಡಿಸಿರುವವ ಸಿ.ಸಿ. ಟಿ.ವಿ. ಪಾಯಿಂಟ್‌ಗಳ ಬಗ್ಗೆ Display board ಗಳನ್ನು ಅಳವಡಿಸುವಂತೆ ಸೂಸಿಚಿರುತ್ತಾರೆ. ಈ ಬಗ್ಗೆ ಗುತ್ತಿಗೆದಾರರಿಗೆ ಸೂಚಿಸಲಾಯಿತು.

ಮುನಿಸಿಪಲ್ ನಂಬರ್‌ಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಲಾಯಿತು. ಈ ಬಗ್ಗೆ ಸಂಬಂಧಪಟ್ಟ ರೆವೆನ್ಯೂ ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಲಾಯಿತು.

ನಾಯಿಗಳ ಹಾವಳಿ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರುಗಳಿಗೆ ಸದರಿ ಹಾವಳಿಗಳನ್ನು ಕಡಿಮೆಗೊಳಿಸಲು ಸೂಚಿಸಲಾಯಿತು.

ಉಳಿದಂತೆ ಮುಂದಿನ ಸಭೆಗಳಿಗೆ ವಾರ್ಡ್‌ನ ಕುಂದು ಕೊರತೆಗಳನ್ನು ಚರ್ಚಿಸಲು ಮತ್ತು ನಿರ್ವಹಿಸಲು ಸಂಬಂಧಪಟ್ಟ ಇಲಾಖಾ ಮೇಲಾಧಿಕಾರಿಗಳನ್ನು ಚರ್ಚಿಸಲು ಸಭೆಗೆ ಕರೆಯಲು ಸರ್ವಾನುಮತದಿಂದ ತಿರ್ಮಾನಿಸಲಾಯಿತು. ಸಭೆಯನ್ನು ಘನತ್ಯಾಜ್ಯ ಅಧಿಕಾರಿಗಳು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

Arpitha C.P

ಕಾರ್ಯದರ್ಶಿಗಳು ಹಾಗೂ ಸಂಚಾಲಕರು
ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ 68
ಮಹಾಲಕ್ಷ್ಮೀಪುರ

ಅಧ್ಯಕ್ಷರು
ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 68
ಮಹಾಲಕ್ಷ್ಮೀಪುರ